ದಿನಾಂಕ: 21.11.2020

# ವಾರ್ಡ್ ಸಮಿತಿ ಸಭಾ ನಡವಳಿಗಳು, ವಾರ್ಡ್ ನಂ-54 ಹೂಡಿ

ದಿನಾಂಕ: 21.11.2020 ರಂದು ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶದಂತೆ ವಾರ್ಡ್ ಸಂಖ್ಯೆ: 54 ಹೂಡಿ ವಾರ್ಡ್ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ಬೆಳಗ್ಗೆ 3.00 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ 54 ರ ವಾರ್ಡ್ ಕಾಮಗಾರಿ ಕಛೇರಿಯಲ್ಲಿ ಏರ್ಪಡಿಸಲಾಗಿದ್ದು ವಾರ್ಡ್‌ನ ಆರ್.ಡಬ್ಲ್ಯೂ.ಎ. ಹಾಗೂ ಸಾರ್ವಜನಿಕರೊಂದಿಗೆ ಕುಂದು ಕೊರತೆಗಳನ್ನು ಚರ್ಚಿಸಲು ನೊಡಲ್ ಅಧಿಕಾರಿಗಳು ಸೂಚಿಸಿರುವಂತೆ.

ಸಭೆಯನ್ನು ವಾರ್ಡ್ ನೋಡಲ್ ಅಧಿಕಾರಿಗಳಾದ ಡಾ//ಕಲ್ಪನಾ ಮೇಡಂ ರವರು ಸಭೆಗೆ ಆಗಮಿಸಿರುವ ಅಧಿಕಾರಿ ನೌಕರರನ್ನು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಸಭೆ ಆರಂಭಿಸಲು ಸೂಚಿಸಿರುತ್ತಾರೆ.

**ಹಾಜರಿದ್ದ ಅಧಿಕಾರಿ ನೌಕರರು ಮತ್ತು ಆರ್.ಡಬ್ಲ್ಯೂ.ಎ.**

1. ಶ್ರೀಮತಿ. ಡಾ// ಕಲ್ಪನಾ . ನೋಡಲ್ ಅಧಿಕಾರಿ.
2. ಶ್ರೀ. ರಂಗನಾಥ್.ಆರ್. AEE Hoodi
3. ಶ್ರೀ. ಶೇಖ್ ಮೊಹಿಯುದ್ದಿನ್ AE Hoodi
4. ಶ್ರೀ. ನಾಗರಾಜ.ವಿ SHI Hoodi
5. ಶ್ರೀ. ಸುದೀಪ್. RI Hoodi
6. ಶ್ರೀ. ವೀರಪ್ಪ. JHI Hoodi
7. ಶ್ರೀ. ಸುರೇಶ್ ಬಾಬು. Marshal
8. ಶ್ರೀ. ಬಾಲರಾಜು. RWA. Belathru
9. ಶ್ರೀ. ಸತೀಶ್. RWA, Ayyappanagar
10. ಶ್ರೀ. ಮಂಜುನಾಥ.ವಿ. RWA, Ayyappanagar
11. ಶ್ರೀ. ಸುದರ್ಶನ್. Contract Sup
12. ಶ್ರೀಮತಿ, ನಾಗರತ್ನ . Contract Sup
13. ಶ್ರೀ. ಸಂಜಯ್. AE (Elec)
14. ಶ್ರೀ. ಶಶಿಕುಮಾರ್. BWSSB
15. ಶ್ರೀ. ಮಾದೇಶ್. RWA. Sadaramangala
16. ಶ್ರೀ. ಪ್ರಸಾದ್. RWA. Kodigehalli.
17. ಶ್ರೀ ಪ್ರಸಾದ್ . RWA. Sadaramangala

**ನೋಡಲ್ ಅಧಿಕಾರಿಗಳು ಹಾಜರಿರುವ ಅಧಿಕಾರಿ ನೌಕರರನ್ನು ಸ್ವಾಗತಿಸಿ.**

ಮಾನ್ಯ ಆಯುಕ್ತರ ಆದೇಶದಂತೆ ಮಹದೇವಪುರ ವಲಯ ವಾರ್ಡ್-54 ರ ಹೂಡಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸಲು ಆದೇಶಿಸಿರುತ್ತಾರೆ ಅದರಂತೆ ವಾರ್ಡ್ ವ್ಯಾಪ್ತಿಯಲ್ಲಿ ಹಸಿಕಸ ಹಾಗೂ ಸ್ಯಾನಿಟರಿ ಕಸವನ್ನು ನಿರ್ವಹಣೆ ಮಾಡಲು ಒಟ್ಟು 36 ಆಟೋಗಳು ಹಾಗೂ 5 ಕಾಂಪಾಕ್ಟರ್‌ಗಳಿದ್ದು ಇದರಲ್ಲಿ ಪಾರ್ಟ್-01 ರಲ್ಲಿ (ಹೂಡಿ, ಅಯ್ಯಪ್ಪನಗರ, ಕೊಡಿಗೇಹಳ್ಳಿ, ಸಾದರಮಂಗಳ, ಬೆಳತ್ತೂರು) 21 ಆಟೋಗಳು ಹಾಗೂ 3 ಕಾಂಪಾಕ್ಟರ್‌ಗಳಿದ್ದು ಹಾಗೂ ಪಾರ್ಟ್-02ರಲ್ಲಿ (ವಾರಣಾಶಿ, ಬಿಳಿಶಿವಾಲೆ, ಭೈರತಿ) 15 ಆಟೋಗಳು 02 ಕಾಂಪಾಕ್ಟರ್‌ಗಳಿದ್ದು ಯಾವುದೇ ಕೊಂದುಕೊರತೆಗಳು ಇರದಂತೆ ಕಾರ್ಯ ನಿರ್ವಹಿಸುತ್ತಿದ್ದು ಹಾಗೂ ಸಭೆಯಲ್ಲಿ ಆರ್.ಡಬ್ಲ್ಯೂ.ಎ ಹಾಗೂ ಸಾರ್ವಜನಿಕರಿಂದ ದೂರುಗಳು ಬಂದಿರುವುದಿಲ್ಲ ಅದರಂತೆ ವಾರ್ಡ್ ವ್ಯಾಪ್ತಿಯಲ್ಲಿ ಶೇಕಡ80% ಹಸಿಕಸ ವಿಂಗಡಣೆಯಾಗಿದ್ದು ಚಿಕ್ಕನಾಗಮಂಗಲ ಪ್ಲಾಂಟ್‌ಗೆ ಸರಬರಾಜು ನಡೆಯುತ್ತಿದೆ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ.

ಒಣ ಕಸ ನಿರ್ವಹಣೆ ಮಾಡಲು ಮಹದೇವಪುರ ಮಹಿಳಾ ಒಕ್ಕೂಟ ಗರುಡಾಚಾರ್‌ಪಾಳ್ಯ ರವರಿಗೆ ಒಡಂಬಡಿಕೆಯ ನಿಯಮದಂತೆ ಕಾರ್ಯನಿರ್ವಹಣೆ ಮಾಡಲು ಪ್ರತಿ ನಿತ್ಯ ಮನೆ ಮನೆಯಿಂದ ಒಣ ತ್ಯಾಜ್ಯ ಸಂಗ್ರಹಿಸಿ ಸಾಗಿಸುವ ಕಾರ್ಯವನ್ನು ಕಾರ್ಯ ರೂಪಕ್ಕೆ ತರಲು 05 ಆಟೋಗಳನ್ನು ನೀಡಿರುತ್ತಾರೆ.

ಅಯ್ಯಪ್ಪನಗರ ಆರ್.ಡಬ್ಲ್ಯೂ.ಎ. ಗಳಾದ ಸತೀಶ್ ಹಾಗೂ ಮಂಜುನಾಥ ರವರು ಒಣಕಸ ನಿರ್ವಹಣೆ ಪ್ರತಿ ದಿನ ನಿರ್ವಹಣೆ ಮಾಡುತ್ತಿಲ್ಲವೆಂದು ದೂರು ನೀಡಿದ್ದು, ಇದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದ್ದು ಮಹಿಳಾ ಒಕ್ಕೂಟ ಗರುಡಾಚಾರ್‌ಪಾಳ್ಯ ಹಾಗೂ ಹಸಿಕಸ ಗುತ್ತಿಗೆದಾರರು ಜೊತೆಗುಡಿ ದೂರುಗಳನ್ನು ಬಗೆಹರಿಸಲು ಅಧ್ಯಕ್ಷರು ಸೂಚಿಸಿರುತ್ತಾರೆ ಹಾಗೂ ಒಣಕಸ ಗುತ್ತಿಗೆದಾರರು 05 ಆಟೋಗಳಲ್ಲಿ ಒಣಕಸ ನಿರ್ವಹಣೆ ಮಾಡಲು ಕಷ್ಟವಾಗಿರುವುದರಿಂದ ಹೆಚ್ಚುವರಿ ಆಟೋಗಳನ್ನು ನೀಡಲು ಕೋರಿರುತ್ತಾರೆ. ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ (ಘನತ್ಯಾಜ್ಯ) ಹಾಗೂ ಜಂಟಿ ಆಯುಕ್ತರ ಮುಖಾಂತರ ಹೊಸದಾಗಿ ಹೆಚ್ಚುವರಿ ಆಟೋಗಳ ಪ್ರಸ್ತಾವನೆ ಮಾಡಲು ಅಧ್ಯಕ್ಷರು ಸೂಚಿಸಿರುತ್ತಾರೆ.

ರಾಂಪುರ ಕರೆ ಮುಖ್ಯ ರಸ್ತೆ ಬದಿಯಲ್ಲಿ ಕಸ ಸುರಿಯುತ್ತಿರುವ ಬಗ್ಗೆ ಕೊತ್ತನೂರು ಪೋಲಿಸ್ ಠಾಣೆಯ ಅಧಿಕಾರಿಗಳು ತಿಳಿಸಿರುತ್ತಾರೆ. ಅದರಂತೆ ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್, ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್, ಮಾರ್ಷಲ್ ರವರು ಸೂಪರ್‌ವೈಸರ್ ಮೇಸ್ತ್ರಿಗಳೊಂದಿಗೆ ಹಾಗೂ ಪೋಲಿಸ್ ಅಧಿಕಾರಿಗಳ ಜೊತೆಗುಡಿ ಕಸಹಾಕುವವರಿಗೆ ದಂಡ ವಿಧಿಸಿ ಶುಚಿಗೊಳಿಸಲು ಸೂಚಿಸಿರುತ್ತಾರೆ.

ಬ್ಲಾಕ್‌ಸ್ಪಾರ್ಟ್ ಸುಂದರೀಕರಣ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದ್ದು, ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್, ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್, ಹಾಗೂ ಬಿಬಿಎಂಪಿ ಅಧಿಕಾರಿಗಳೊಂದಿಗೆ ಬ್ಲಾಕ್‌ಸ್ಪಾರ್ಟ್ ಸುಂದರೀಕರಣ ಮಾಡಲು ಅಧ್ಯಕ್ಷರು ಸೂಚಿಸಿರುತ್ತಾರೆ.

ಆರ್.ಡಬ್ಲ್ಯೂ.ಎ.ಗಳಾದ ಪ್ರಸಾದ್ ಹಾಗೂ ಸಾರ್ವಜನಿಕರು ಸಾಧರಮಂಗಲ ರೈಲ್ವೆ ಟ್ರ್ಯಾಕ್ ಪಕ್ಕದ ರಸ್ತೆಯಲ್ಲಿ ಡೆಬ್ರೀಸ್ ಸುರಿಯುತ್ತಿದ್ದಾರೆ ಎಂದು ತಿಳಿಸಿರುತ್ತಾರೆ. ಅದರಂತೆ ಅಧ್ಯಕ್ಷರು ವಾರ್ಡ್ ಮಾರ್ಷಲ್‌ಗೆ ಪ್ರತಿ ನಿತ್ಯ ವಾರ್ಡ್‌ನಲ್ಲಿ ಡೆಬ್ರೀಸ್ ಹಾಕುವವರಿಗೆ ದಂಡ ವಿಧಿಸಲು ಸಭೆಯಲ್ಲಿ ಅಧ್ಯಕ್ಷರು ಸೂಚಿಸಿರುತ್ತಾರೆ.

ಸಾದರಮಂಗಳ ಸ್ಲಂ ಬೋರ್ಡ್‌ನಲ್ಲಿ ಕಸ ವಿಂಗಡನೆಯಾಗಿರುವುದಿಲ್ಲ ಆದ್ದರಿಂದ ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್, ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಹಾಗೂ ಆರ್.ಡಬ್ಲ್ಯೂ.ಎ ಸಮುಕದಲ್ಲಿ ಕಸ ವಿಂಗಡನೆ ಮಾಡಲು ಸಾರ್ವಜನಿಕರಿಗೆ ಅರಿವು ಮೂಡಿಸಲು ಅಧ್ಯಕ್ಷರು ಸಭೆಯಲ್ಲಿ ಸೂಚಿಸಿರುತ್ತಾರೆ.

ಮಹದೇವಪುರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ (ಘನತ್ಯಾಜ್ಯ) ಅಧಿಕಾರಿಗಳಿಗೆ ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ಹಾಜರಾಗಲು ಸೂಚಿಸಿರುತ್ತಾರೆ.

ಆರ್.ಡಬ್ಲ್ಯೂ.ಎ.ಗಳಾದ ಬಾಲರಾಜು ರವರು ಎಚ್‌ಡಿಎಫ್‌ಸಿ ಹಿಂಭಾಗದ ರಸ್ತೆಯಲ್ಲಿ ಹೊಸ ಚರಂಡಿ ಹಾಗೂ ಕಲ್‌ವರ್ಟ್ ಮಾಡಿಸಲು ಅಧ್ಯಕ್ಷರಿಗೆ ಕೋರಿರುತ್ತಾರೆ ಇದರ ಬಗ್ಗೆ ಸಭೆಯನ್ನು ಚರ್ಚಿಸಲಾಗಿ ವಾರ್ಡ್ ಅಭಿಯಂತರರಿಗೆ ಇದರ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಲು

ಸೂಚಿಸಲಾಗಿದೆ.

ಸಭೆಯಲ್ಲಿ ರಸ್ತೆ ಗುಂಡಿಯ ಬಗ್ಗೆ ಚರ್ಚಿಸಲಾಗಿದ್ದು ಹೂಡಿ ಕೊಡಿಗೇಹಳ್ಳಿ ಮುಖ್ಯ ರಸ್ತೆಯಲ್ಲಿ ಗುಂಡಿಗಳಿದ್ದು ಅದನ್ನು ಕೊಡಲೇ ಮುಚ್ಚಲು ಎಇಇ ಮೇಜರ್ ರೋಡ್ ರವರಿಗೆ ತಿಳಿಸಲಾಯಿತು.

ಆರ್.ಡಬ್ಲ್ಯೂ.ಎ. ಮಂಜುನಾಥ್ ರವರು ಅಯ್ಯಪ್ಪನಗರ ಓಂ ಶಕ್ತಿ ಬಡಾವಣೆ ಮತ್ತು ಅಪ್ಟಿಮ್ಮಮ್ ಗಾರ್ಡನ್‌ನಲ್ಲಿ ಕಾವೇರಿ ನೀರಿನಲ್ಲಿ ಡ್ರೈನೇಜ್ ನೀರು ಶೇಖರಣೆಯಾಗಿದೆ ಎಂದು ದೂರು ನೀಡಿರುತ್ತಾರೆ. ಅದರಂತೆ ಅಧ್ಯಕ್ಷರು, ಎಇ ನವೀನ್ (ಬಿ.ಡಬ್ಲ್ಯೂ.ಎಸ್.ಎಸ್.ಬಿ.) ರವರಿಗೆ ಇದಕ್ಕೆ ಸಂಬಂಧಿಸಿದಂತೆ ಕೋಡಲೆ ಸರಿಪಡಿಸಿ, ನೀರಿನ ಗುಣಮಟ್ಟವನ್ನು ಪರಿಶೀಲಿಸಿ ನೀರನ್ನು ಬಿಡಲು ಸೂಚಿಸಿರುತ್ತಾರೆ.

ಬೀದಿ ದೀಪಗಳಗೆ ಸಂಬಂಧಿಸಿದಂತೆ ಬೀದಿ ದೀಪಗಳ ನಿರ್ವಹಣೆ ಬಗ್ಗೆ ಆರ್.ಡಬ್ಲ್ಯೂ.ಎ. ಮಂಜುನಾಥ್, ಬಾಲರಾಜ್, ಸತೀಶ್, ಹಾಗೂ ಸಾರ್ವಜನಿಕರಿಂದ ದೂರುಗಳು ಬಂದಿದ್ದು ನಿರ್ವಹಣೆ ಸರಿಯಾಗಿ ಮಾಡುತ್ತಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಆರ್.ಡಬ್ಲ್ಯೂ.ಎ. ಬಾಲರಾಜು ರವರು ಬೆಳತ್ತೂರು ಕೀರ್ತಿ ಅಪಾರ್ಟ್‌ಮೆಂಟ್ ಹಿಂಭಾಗ ರಸ್ತೆ ಬದಿಯಲ್ಲಿ ಬೀದಿ ದೀಪಗಳನ್ನು ಸರಿಮಾಡಲು ಸೂಚಿಸಿದರೂ ಸಹ ಸರಿಯಾಗಿ ಮಾಡುತ್ತಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಮಂಜುನಾಥ ರವರು ಬೀದಿ ದೀಪಗಳಿಗೆ ಸ್ವಿಚ್ ಅಳವಡಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ .

ಅಧ್ಯಕ್ಷರು ಹಾಜರಿದ್ದ ಬೀದಿ ದೀಪಗಳ ನಿರ್ವಹಣೆ ಮಾಡುತ್ತಿರುವ ಸಂಜಯ್ (AE Electrical) ರವರಿಗೆ ಈ ಮೇಲೆ ತಿಳಿಸಿರುವ ದೂರುಗಳನ್ನು ತಕ್ಷಣ ಸರಿಪಡಿಸುವಂತೆ ಸೂಚಿಸಿರುತ್ತಾರೆ.

ಹೂಡಿ ವಾರ್ಡ್‌ನಲ್ಲಿ ಹಂದಿಗಳ ಹಾವಳಿಗಳ ಬಗ್ಗೆ ಆರ್.ಡಬ್ಲ್ಯೂ.ಎ. ಮಂಜುನಾಥ್ ಹಾಗೂ ಸತೀಶ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ. ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಾದ ಡಾ// ಸುರೇಶ್ ರವರಿಗೆ ಪೋನಿನ ಮುಖಾಂತರ ಕೊಡಲೇ ಕ್ರಮ ವಹಿಸಲು ಸೂಚಿಸಿರುತ್ತಾರೆ.

Covid-19 Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿತ್ತು.

ನಂತರ ವಾರ್ಡ್ ಸಮಿತಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೊಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ–54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ